they obey? ಇದೊಂದೇ ಕೇಸಲ್ಲ, 14 ಸಂದರ್ಭಗಳಲ್ಲಿ ಹೀಗೆ ಒಂದು ಆರ್ಡರಾಗಿದೆ. ಇನ್ನು 30 ಕೇಸುಗಳು ಬೇರೆ ಇವೆ. Out of 14 cases, 6 are ordinary darkhast and 8 are under Grow More Food Scheme. ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ಕೊಟ್ಟರುವುದಕ್ಕೆ ಸಾಗುವಳಿ ಚೀಟಿಯಲ್ಲಿ ಅಫ್ಸೆಟ್‌ಪ್ರೈಸ್ ಇಷ್ಟು ಎಂದು ಹಾಕಿದೆ. ಅದರ ಮೇಲೆ ವಸೂಲು ಮಾಡಲು ಸರ್ಕಾರಕ್ಕೆ ಅಧಿಕಾರವೇನಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆಯೇ ಈ ವಿಚಾರದಲ್ಲಿ ಸಾಕಾದಷ್ಟು ಸಮಜಾಯಿಷಿ ಕೊಟ್ಟಿದೆ. ಜಿ.ಎಂ.ಎಫ್. ಯೋಜನೆ ಪ್ರಕಾರ ಜಮೀನು ಕೊಟ್ಟಿರುವುದು ಸರಿಯಲ್ಲ, ಹಿಂದೆ ಯಾವ ಬೆಲೆ ನಿಗದಿಮಾಡಿರುತ್ತಾರೋ ಅದನ್ನೇ ತೆಗೆದುಕೊಳ್ಳಬೇಕು; ಒಂದುವೇಳೆ ಅಲ್ಲಿದ್ದ ಸ್ಥಳೀಯ ಸರ್ಕಾರಿ ನೌಕರರು ಮತ್ತು ದರಖಾಸ್ತುದಾರರು ಪರೀಕ್ಷಾಗಿ ಸರ್ಕಾರಕ್ಕೆ ಪೋಸ ಮಾಡುವ ಪರಿಸ್ಥಿತಿಯಿದ್ದರೆ, ಕಡಮೆ ಬೆಲೆ ನಿಗದಿಮಾಡಿದ್ದರೆ ಅಥವಾ ಸರ್ಕಾರದ ಜಮೀನು ಕೊಡಲು ಏನು ಷರತ್ತಿದೆಯೋ ಅದಕ್ಕೆ ವಿರುದ್ಧವಾಗಿ ದರಖಾಸ್ತುದಾರರಿಗೆ ಕೊಟ್ಟಿದ್ದರೆ ಅಂಥ ಸಂದರ್ಭದಲ್ಲಿ ಮಾತ್ರ ಅಫ್ಸೆಟ್ ಬೆಲೆಯನ್ನು ಹೆಚ್ಚಿಸಲು ಅಧಿಕಾರಿಗಳಿಗೆ ಹಕ್ಕಿದೆ.

Lands Granted under Grow More Food Scheme (Disposal by ryots before confirmation).

Q.—588. **Sri SHIVANANJE GOWDA** (Mysore Taluk).—

Will the Government be pleased to state :—

(*a*) whether it has come to their notice that lands given for temporary cultivation under the Grow More Food Scheme have been disposed of even before the said lands were confirmed to saguvalidars;

(*b*) if so, the action taken by them in this respect?

A.—**Sri Kadidal MANJAPPA** (Minister for Revenue and Public Works).—

(*a*) No. Cases of that kind are very few and in such cases action is being taken to confirm or cancel the grants according to the circumstances of the case.

(*b*) Does not arise in view of answer to (*a*).

ಶ್ರೀ ಶಿವನಂಜೇಗೌಡ.—ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಹಿಂದೆ ಜಮೀನುಗಳನ್ನು ಜನರಿಗೆ ಕೊಟ್ಟರು. ಅವರ ಹೆಸರಿಗೆ ಆ ಜಮೀನುಗಳು ಖಾಯಂ ಆಗುವುದಕ್ಕೆ ಮೊದಲೇ ವಿಕ್ರಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಶಿವನಂಜೇಗೌಡ.—ಎಷ್ಟು ಅಂಥ ಸಂದರ್ಭಗಳು ಗಮನಕ್ಕೆ ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಶಿವನಂಜೇಗೌಡ.—ಜಮೀನು ಕೊಡುವ ಸಂದರ್ಭದಲ್ಲಿ ಎಲ್ಲಿ ಜಮೀನಿದೆಯೋ ಅಲ್ಲಿಗೆ ಜನರು ಹೋಗುವುದಿಲ್ಲ ಎಂದು ಸರ್ಕಾರದವರು ಹೇಳುವುದು ನಿಜವೆ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿರುವ ಕಡೆಗೆ ಜನರು ಹೋಗುವುದಿಲ್ಲ, ಜನರಿರುವ ಕಡೆಗೆ ಜಮೀನು ಬರುವುದಿಲ್ಲ.

ಶ್ರೀ ಶಿವನಂಜೇಗೌಡ.—ಒಂದು ಸ್ಥಳದಲ್ಲಿರುವ ಜಮೀನನ್ನ ಆ ಸ್ಥಳದವರಿಗೇ ಕೊಡಬೇಕು, ದೂರದಲ್ಲಿರುವವರಿಗೆ ಕೊಡುವುದಿಲ್ಲ ಎಂದು ಅಮಲ್ದಾರರು ಹೇಳುತ್ತಾರೆ. ಹೀಗಿರುವಾಗ ಜಮೀನಿರುವ ಕಡೆಗೆ ಜನ ಹೋಗಬೇಕೆಂದರೆ ಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಎರಡನ್ನೂ ಗಮನಿಸಿ ಜಮೀನು ವಿಲೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಆಯಾ ಗ್ರಾಮದಲ್ಲಿ ಜಮೀನಿಲ್ಲದಿರುವವರಿಗೆ ಕೊಟ್ಟು ಇನ್ನೂ ಹೆಚ್ಚಾಗಿ ಜಮೀನು ಉಳಿದರೆ ಬಾಕಿಯವರಿಗೆ ಕೊಡುವುದು ಸೂಕ್ತ.

Land grants in Birur Amritmahal Kaval to hostels.

Q.—591. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the extent of amritmahal kaval at Birur in Kadur Taluk and its survey number ;

(*b*) the number of acres surrendered in the said kaval (survey numberwar details to be furnished);

(*c*) the extent of land granted in each survey number to each of the private hostels and the names of those hostels ;

(*d*) the extent of land granted for the hostels in Survey No. 4;

(*e*) the number of hostels in respect of which applications are received for grant of land in the said Survey No. 4 ;

(*f*) the steps taken in this behalf?